ಶ್ರೀ ಆರ್. ಅಶೋಕ್ : ಲಸಿಕೆ ಬ್ಯಾನ್ ಮಾಡಿರುವ ಬಗ್ಗೆ ಮಂತ್ರಿಗಳು ಸರ್ಟಿಫಿಕೇಟ್ ಕೇಳಿದ್ದಾರೆ. ಅದು ನನ್ನ ಹತ್ತಿರ ಇದೆ. ಕೇರಳದಲ್ಲಿ, ಆ ಲಸಿಕೆ ಸರಿಯಿಲ್ಲ ಎಂದು ಬ್ಯಾನ್ ಮಾಡಿರುವುದಕ್ಕೆ ನನ್ನ ಹತ್ತಿರ ಸರ್ಟಿಫಿಕೇಟ್ ಇದೆ. ನನಗೆ ಸಿಗುವ ಈ ಸರ್ಟಿಫಿಕೇಟ್ ಅಧಿಕಾರಿಗಳಿಗೆ ಏಕೆ ಸಿಗುವುದಿಲ್ಲ? ದಯವಿಟ್ಟು, ಇದರ ಬಗ್ಗೆ ಕ್ರಮ ತೆಗೆದುಕೊಂಡು ಆ ಲಸಿಕೆಯನ್ನು ಬ್ಯಾನ್ ಮಾಡಬೇಕು. ಆ ಲಸಿಕೆಯನ್ನು ಹಾಕಲು ಗಂಡು ನಾಯಿಗಳಿಗೆ 300 ರೂಪಾಯಿ, ಹೆಣ್ಣು ನಾಯಿಗಳಿಗೆ 250 ರೂಪಾಯಿ ಎಂದು ಫಿಕ್ಸ್ ಮಾಡಿದ್ದಾರೆ. ಅದೂ ಸಹಾ ಬೋಗಸ್ಸೇ. ಲಸಿಕೆಯನ್ನು ಇಲ್ಲಿ ಯಾರೂ ಹಾಕುತ್ತಿಲ್ಲ. ಅದನ್ನು ಬೇರೆ ರಾಜ್ಯದವರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಈ ನಾಯಿಗೆ ಲಸಿಕೆ ಹಾಕಿದೆಯೋ ಇಲ್ಲವೋ ಎನ್ನುವುದನ್ನು ಇವರು ಹೇಗೆ ಕಂಡುಹಿಡಿಯುತ್ತಾರೆ? ಲಸಿಕೆ ಹಾಕಲಾಗಿದೆ ಎನ್ನುವುದನ್ನು ಸರ್ಟಿಫೈ ಮಾಡುವಂಥ ಅಧಿಕಾರಿಗಳ್ಯಾರು? ಮುದ್ರೆ ಯಾರು ಹಾಕುತ್ತಾರೆ? ನಾಯಿಗಳಿಗೇನಾದರೂ ಹೆಸರಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್: ನಿಮ್ಮ ಹತ್ತಿರ ಇರುವ ಸರ್ಟಿಫಿಕೇಟನ್ನು ನನಗೆ ಕಳುಹಿಸಿಕೊಡಿ. ಅದನ್ನು ಪರಿಶೀಲಿಸುತ್ತೇವೆ. ನಾವು ಯಾವುದೇ ಔಷಧವನ್ನು ಉಪಯೋಗಿಸಬೇಕಾದರೂ ಸಹ ಡ್ರಗ್ ಕಂಟ್ರೋಲರ್‌ರವರ ಮಾರ್ಗದರ್ಶನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರು, ಇದು ಸರಿಯಾಗಿದೆ, ಉಪಯೋಗಿಸಬಹುದು ಅಥವಾ ಉಪಯೋಗಿಸಲು ಸರಿಯಿಲ್ಲ ಎಂದು ಹೇಳುತ್ತಾರೆ. ಅವರು ಹೇಳಿದರೆ ಮಾತ್ರ ನಾವು ಉಪಯೋಗಿಸುತ್ತೇವೆ. ಆದ್ದರಿಂದ, ತಮಗೆ ಯಾವುದೇ ಆತಂಕ ಬೇಡ. ತಮ್ಮ ಹತ್ತಿರವಿರುವ ಸರ್ಟಿಫಿಕೇಟನ್ನು ಕೊಟ್ಟರೆ ನಾವು ಅದನ್ನು ಪರಿಶೀಲಿಸುತ್ತೇವೆ.

ಅಬಕಾರಿ ಗುತ್ತಿಗೆ ದಾರರಿಂದ ಬರಬೇಕಾದ ತೆರಿಗೆ ಬಾಕಿ ಬಗ್ಗೆ

246(2144) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅಬಕಾರಿ ಗುತ್ತಿಗೆದಾರರು ಮತ್ತು ಮದ್ಯ ತಯಾರಕರುಗಳಿಂದ 1999-2000ನೇ ಇಸವಿಯಿಂದ ಬಾಕಿ ಇರುವ ವಿವಿಧ ರೀತಿಯ ತೆರಿಗೆ ಮತ್ತು ಶುಲ್ಕಗಳ ಮೊತ್ತ ಎಷ್ಟು ? ಅವುಗಳನ್ನು ತ್ವರಿತ ವಸೂಲಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ. ಬಾಕಿ ಇರುವ ಸಂಸ್ಥೆಗಳ, ಗುತ್ತಿಗೆದಾರರ ವಿವರಗಳು ಮತ್ತು ಬಾಕಿ ಮೊತ್ತ ಎಷ್ಟು? (ವಿವರ ನೀಡುವುದು);

ಇ. ಬಾಕಿ ಮೊತ್ತವನ್ನು ಉಳಿಸಿಕೊಂಡಿರುವವರ ಮೇಲೆ ಜರುಗಿಸಿದ ಕಾನೂನು ಕ್ರಮಗಳೇನು?

ಶ್ರೀ ಎಂ. ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ. ಅಬಕಾರಿ ಇಲಾಖೆಯಲ್ಲಿ ತೆರಿಗೆ ವಿಧಿಸುವ ಕ್ರಮ ಇರುವುದಿಲ್ಲ.

ಅಬಕಾರಿ ಸುಂಕ, ಹೆಚ್ಚುವರಿ ಅಬಕಾರಿ ಸುಂಕ ಮತ್ತು ಲೀಟರ್ ಶುಲ್ಕವನ್ನು ಡಿಸ್ಟಿಲರಿಗಳಿಂದ ಮದ್ಯಗಳನ್ನು ಬಿಡುಗಡೆ ಮಾಡುವಾಗಲೇ ವಸೂಲು ಮಾಡಲಾಗುವ ಕಾರಣ ಬಾಕಿ ಇರುವುದಿಲ್ಲ.

ಲೈಸೆನ್ಸ್ ಶುಲ್ಕವನ್ನು ಸಹ ಅಬಕಾರಿ ವರ್ಷ ಪ್ರಾರಂಭವಾಗುವ ಮುಂಚೆಯೇ ಮುಂಗಡವಾಗಿ ವಸೂಲು ಮಾಡಲಾಗುತ್ತದೆ.

ಅಬಕಾರಿ ಗುತ್ತಿಗೆದಾರರು ಸಾರಾಯಿ ಬಾಡಿಗೆ ಪಾವತಿ ಸಂಬಂಧಿಸಿದಂತೆ ಮಾತ್ರ ಕೆಲವು ಬಾಕಿ ಇರುತ್ತದೆ 1999-2000ನೇ ಸಾಲಿನಿಂದ ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಒಟ್ಟು ಬಾಕಿ ರೂ. 20.13 ಕೋಟಿಗಳು ಆಗಿರುತ್ತದೆ.

ಬಾಕಿಯನ್ನು ವಸೂಲು ಮಾಡಲು ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ.

1. ಅಬಕಾರಿ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಅಬಕಾರಿ ಇಲಾಖೆ ಬಾಕಿಯನ್ನು ವಸೂಲಿ ಮಾಡಲು ಕ್ರಮ ಜರುಗಿಸಿದೆ.

2. ಕೆಲವು ಪ್ರಕರಣಗಳಲ್ಲಿ ಬಾಕಿ ಹಣವನ್ನು ಭೂಕಂದಾಯ ಕಾಯ್ದೆಯಡಿ ವಸೂಲು ಮಾಡಲು ಕಂದಾಯ ಇಲಾಖೆಗೆ ವಹಿಸಲಾಗಿದೆ.

ಆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ. ಅಬಕಾರಿ ಕಾನೂನಿನನ್ವಯ ಅಬಕಾರಿ ಬಾಕಿದಾರರಿಂದ ಬಾಕಿಯ ವಸೂಲಿಯನ್ನು ಮಾಡಲು ಕ್ರಮ ಕೈಗೊಂಡಿದ್ದು ಕೆಲವು ಪ್ರಕರಣಗಳನ್ನು ಭೂಕಂದಾಯದ ಕಾಯ್ದೆಯಡಿಯಲ್ಲಿ ವಸೂಲಿ ಮಾಡಲು ಕಂದಾಯ ಇಲಾಖೆಗೆ ವಹಿಸಲಾಗಿದೆ.

ಅನುಬಂಧ

TALUKWISE ARREARS LIST

As on 31-3-2002

Sl. No	Contractor Name	Arears		Arrears covered under court stay		Arrears referred to Revenue Dept for recovery		Arrears with the Department		Total Arresrs		TOTAL
		YEAR	TYPE	PRI	INT	PRI	INT	PRI	INT	PRI	INT	
1	2	3	4	5	6	7	8	9	10	11	12	13
				DISTRICT 1. CHAMARAJNAGAR								
TALUK	1. C.R.NAGAR	1999-00	LOS	0	0	0	0	13428172	4229874	13428172	4229874	17658046
1	**PARASHIVA MURTHY**											
TALUK	2. GUNDLUPET	1999-00	LOS	0	0	0	0	3721642	1172318	3721642	1172318	4893960
1	**PARASHIVA MURHTY**											
TALUK	3. KOLLEGAL	1999-00	LOS	0	0	0	0	36190957	11400151	36190957	11400151	47591108
1	**KRISHNA. T**											
TALUK	4. YELANDUR	1999-00	LOS	0	0	0	0	6130175	1931005	6130175	1931005	8061180
1	**KRISHNA. T**											
	DISTRICT TOTAL			**0**	**0**	**0**	**0**	**59470946**	**18733348**	**59470946**	**18733348**	**78204294**
				DISTRICT 2 CHITHRADURGA								
TALUK	1. HOLALKERE	1999-00	OTH	0	0	0	0	721726	0	721726	0	721726
1	**RAMAPPA.G**											
	DISTRICT TOTAL			**0**	**0**	**0**	**0**	**721726**	**0**	**721726**	**0**	**721726**

1	2	3	4	5	6	7	8	9	10	11	12	13
				DISTRICT 3 D'KANNADA								
TALUK	1. MANGALORE	1999-00	ASR	0	0	2421294	1021500	0	0	2421294	1021500	3442794
1	**CHITHARANJAN RAI.B**											
	DISTRICT TOTAL			**0**	**0**	**2421294**	**1021500**	**0**	**0**	**2421294**	**1021500**	**3442794**
				DISTRICT 4 GULBURGA								
TALUK	1. GULBARGA	1999-00	ASR	0	0	0	0	0	1100956	0	110956	1100956
1	**CHANNABASAPPA CHETTY**											
	DISTRICT TOTAL			**0**	**0**	**0**	**0**	**0**	**1100956**	**0**	**110956**	**1100956**
				DISTRICT 5 MYSORE								
TALUK	1. K.D.KOTE	1999-00	OTH	0	0	0	0	6572277	0	6572277	0	6572277
1	**BALASUBRAMANYAM**											
TALUK	2 HUNSURE	1999-00	OTH	0	0	0	0	9326079	0	9326079	0	9326079
1	**BALAJI LIQUORS**											
TALUK	3. K.R.NAGAR	1999-00	OTH	0	0	0	0	9437942	0	9437942	0	9437942
1	**BALAJI LIQUORS**											
TALUK	4. NANJUNGUD	1999-00	OTH	0	0	0	0	10887918	0	10887918	0	10887918
1	**KRISHNA.T**											
TALUK	5. PIRIYAPATNA	1999-00	OTH	0	0	0	0	16932445	0	16932445	0	16932445
1	**BALAJI LIQUORS**											
TALUK	6. T.NARASIPURA	1999-00	OTH	0	0	0	0	22548974	0	22548974	0	22548974
1	**KRISHNA.T**											
	DISTRICT TOTAL			**0**	**0**	**0**	**0**	**75705635**	**0**	**75705635**	**0**	**75705635**
	YEAR TOTAL			**0**	**0**	**2421294**	**1021600**	**135898307**	**19834304**	**138319601**	**20855804**	**159175405**

Sl. No	Contractor Name	Arears		Arrears covered under court stay		Arrears referred to Revenue Dept for recovery		Arrears with the Department		Total Arresrs		TOTAL
		YEAR	TYPE	PRI	INT	PRI	INT	PRI	INT	PRI	INT	
1	2	3	4	5	6	7	8	9	10	11	12	13
YEAR 2000-01												
				DISTRICT 1. BAGALKOT								
TALUK	1. BADAMI	2000-01	ASR	0	0	0	0	0	87457	0	87457	87547
1	**CHENNAPPA. M.C**											
TALUK	2. BAGALKOTE	2000-01	ASR	0	0	0	0	0	82113	0	82113	82113
1	**GUTTEDAR M.N**											
TALUK	3. MUDHOL	2000-01	ASR	0	0	0	0	0	61066	0	61066	61066
1	**TORGAL DISTILLERY (P)LTD**											
	DISTRICT TOTAL			**0**	**0**	**0**	**0**	**0**	**230636**	**0**	**230636**	**230636**
				DISTRICT 2. BIDAR								
TALUK	1. BASAVAKALYAN	2000-01	ASR	0	0	0	0	0	353258	0	353258	353258
1	**JON A.V**											
TALUK	2. HUMANABAD	2000-01	ASR	0	0	0	0	0	510939	0	510939	510939
1	**JON A.V**											
	DISTRICT TOTAL			**0**	**0**	**0**	**0**	**0**	**864197**	**0**	**864197**	**864197**

1	2	3	4	5	6	7	8	9	10	11	12	13
							DISTRICT 3. BIJAPURA					
TALUK	1. BIJAPUR	2000-01	ASR	0	0	0	0	0	444048	0	444048	444048
1	**TORGAL DISTILLERY (P) LTD**											
	DISTRICT TOTAL			**0**	**0**	**0**	**0**	**0**	**444048**	**0**	**444048**	**444048**
							DISTRICT 4. CHAMARAJANAGAR					
TALUK	1. C.R. NAGAR	2000-01	INT	0	0	0	0	0	330000	0	330000	330000
1	**RAVIKUMAR. N**											
TALUK	2. GUNDLUPET	2000-01	INT	0	0	0	0	0	451241	0	451241	451241
1	**KRISHNA M.S**											
TALUK	3. KOLLEGAL	2000-01	INT	0	0	0	0	0	826439	0	826439	826439
1	**MEDAPPA M.P**											
TALUK	4. YELANDUR	2000-01	INT	0	0	0	0	0	266458	0	266458	266458
	PONNANNA K.M											
	DISTRICT TOTAL			**0**	**0**	**0**	**0**	**0**	**1874138**	**0**	**1874138**	**1874138**
							DISTRICT 5. CHITHRADURGA					
TALUK	1. CHALLAKERE	2000-01	INT	0	0	0	0	0	475228	0	475228	475228
1	**SOMASHEKAR H.V**											
TALUK	2. CHITHRADURGA											
1	**SUBAIR T.A**	2000-01	INT	0	0	0	0	0	964887	0	964887	964887
TALUK	3. HIRIYUR	2000-01	INT	0	0	0	0	0	276074	0	276074	276074
1	**ANADAREDDY.P**											
	DISTRICT TOTAL			**0**	**0**	**0**	**0**	**0**	**1716189**	**0**	**1716189**	**1716189**

1	2	3	4	5	6	7	8	9	10	11	12	13
							DISTRICT 6. GULBARGA					
TALUK	1. AFZALPUR	2000-01	ASR	0	0	0	0	0	145800	0	145800	145800
1	**VISHAL C. GUTTEDAR**											
TALUK	2. CHINCHOLI	2000-01	ASR	0	0	0	0	0	52600	0	52600	52600
1	**NARASEGOWDA M.Y**											
TALUK	3. GULBARGA	2000-01	ASR	0	0	0	0	0	604152	0	604152	604152
1	**KUSHAL M GUTTEDAR**											
TALUK	4. JEWARGI	2000-01	ASR	0	0	0	0	0	1537133	0	1537133	1537133
1	**CHANNABASAPPA CHETTY**											
	DISTRICT TOTAL			**0**	**0**	**0**	**0**	**0**	**2339685**	**0**	**2339685**	**2339685**
							DISTRICT 7. HASSAN					
TALUK	1. SAKALESHPURA	2000-01	ASR	0	0	0	0	0	91998	0	91998	91998
1	**SURESH B.S**											
	DISTRICT TOTAL			**0**	**0**	**0**	**0**	**0**	**91998**	**0**	**91998**	**91998**
							DISTRICT 8. KOLAR					
TALUK	1. BANGARPET	2000-01	ASR	0	0	0	0	0	657630	0	657630	657630
1	**KRISHNA M.S**											
TALUK	2. KOLAR	2000-01	ASR	0	0	0	0	0	851051	0	851051	851051
1	**SANJEEV REDDY**											
	DISTRICT TOTAL			**0**	**0**	**0**	**0**	**0**	**1508681**	**0**	**1508681**	**1508681**

1	2	3	4	5	6	7	8	9	10	11	12	13
						DISTRICT 9 MANDYA						
TALUK	1. K.R.PET	2000-01	ASR	0	0	0	0	0	892660	0	892660	892660
1	**KRISHNA M.N**											
TALUK	2. MADDUR	2000-01	ASR	0	0	0	0	0	1170700	0	1170700	1170700
1	**KRISHNA M.N**											
TALUK	3. MALAVALLI	2000-01	ASR	0	0	0	0	0	1332940	0	1332940	1332940
1	**SUBARE T.S**											
TALUK	4. MANDYA	2000-01	ASR	0	0	0	0	0	454425	0	454425	454425
1	**KRISHNA M.N**											
TALUK	5. SRIRANGAPATNA											
1	**SUBARE T.S**	2000-01	ASR	0	0	0	0	0	409216	0	409216	409216
	DISTRICT TOTAL			**0**	**0**	**0**	**0**	**0**	**4259941**	**0**	**4259941**	**4259941**
						DISTRICT 10 MYSORE						
TALUK	1. H.D. KOTE	2000-01	ASR	0	0	0	0	0	800000	0	800000	800000
1	**SUBER. T.A**											
TALUK	2. MYSORE	2000-01	ASR	0	0	0	0	0	900000	0	900000	900000
1	**SRINIVAS R**											
TALUK	3.NANJANGUD	2000-01	AST	0	0	0	0	0	800000	0	800000	800000
1	**KRISHNA M.S**											
	DISTRICT TOTAL			**0**	**0**	**0**	**0**	**0**	**2500000**	**0**	**2500000**	**2500000**

1	2	3	4	5	6	7	8	9	10	11	12	13
						DISTRICT: 11 RAICHUR						
TALUK	1. RAICHUR	2000-01	ASR	0	0	0	0	0	26288986	0	26288986	26288986
1	**PHANIBHUSHAN**											
	DISTRICT TOTAL			**0**	**0**	**0**	**0**	**0**	**26288986**	**0**	**26288986**	**26288986**
	YEAR TOTAL			**0**	**0**	**0**	**0**	**0**	**26288986**	**0**	**26288986**	**26288986**
	GRAND TOTAL	0	0	2421294	1021500	16218793	35663817	164608587	36685317	201293904		

ASR Arrack Shop Rentals

INT Interest

LDR Loss Due to Reauction

OTH Others

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, ಒಟ್ಟು 20.13 ಕೋಟಿ ರೂ.ಗಳ ಬಾಕಿ ಶುಲ್ಕ ಬರಬೇಕಾಗಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ಕೆಲವು ಪ್ರಕರಣಗಳನ್ನು ಭೂಕಂದಾಯ ಕಾಯಿದೆಯಡಿಯಲ್ಲಿ ವಸೂಲಿ ಮಾಡಲು ಕಂದಾಯ ಇಲಾಖೆಗೆ ವಹಿಸಲಾಗಿದೆ ಎಂದು ಹೇಳಿದ್ದಾರೆ. ಯಾವ ಪ್ರಕರಣಗಳಲ್ಲಿ ವಹಿಸಲಾಗಿದೆ ಮತ್ತು ಇನ್ನೂ ಏಕೆ ಬಾಕಿ ವಸೂಲಿ ಮಾಡಿಲ್ಲ? ವಸೂಲಿ ಮಾಡಲು ಬೇರೆ ಏನಾದರೂ ಕ್ರಮಗಳನ್ನು ತೆಗೆದುಕೊಳ್ಳುವಿರಾ? ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡಿದ್ದರೆ ಈ ರೀತಿ ಬಾಕಿ ಉಳಿಯುತ್ತಿರಲಿಲ್ಲ. ಬ್ಯಾಂಕ್ ಗ್ಯಾರಂಟಿಯನ್ನು ಏಕೆ ತೆಗೆದುಕೊಳ್ಳಲಿಲ್ಲ? ರೀ-ಆಕ್ಷನ್ ಮಾಡುವಾಗ ಕಡಿಮೆಯಾಗಿದೆ ಎಂದು ಹೇಳಿದ್ದೀರಿ. ರೀ-ಆಕ್ಷನ್ ಮಾಡುವಂಥ ಪ್ರಸಂಗ ಏಕೆ ಬಂತು? ಏಕೆ ಕಡಿಮೆಯಾಯಿತು? ಇವುಗಳಿಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಎಂ.ಎಂ. ನಾಣಯ್ಯ: ಅಬಕಾರಿ ಹರಾಜು ಸಾಮಾನ್ಯವಾಗಿ ಮೇ-ಜೂನ್ ತಿಂಗಳಲ್ಲಿ ನಡೆಯುತ್ತದೆ. ಆಗ ರಾಜ್ಯದಲ್ಲಿ ಅಷ್ಟು ಬರಗಾಲ ಕಾಣಿಸಿರಲಿಲ್ಲ. ನಂತರ ರಾಜ್ಯದಲ್ಲಿ ಬರಗಾಲ ಕಾಣಿಸಿತು ಮತ್ತು ನೀರಾ ಚಳುವಳಿ ಬಂತು. ಗುತ್ತಿಗೆದಾರರು ಬ್ಯಾಂಕ್ ಗ್ಯಾರಂಟಿಯನ್ನು ಮೂರು ತಿಂಗಳೊಳಗೆ ಕೊಡಬೇಕಾಗಿತ್ತು. ಆದರೆ ಅವರು ಬ್ಯಾಂಕ್ ಗ್ಯಾರಂಟಿ ಕೊಡಲು ಸ್ವಲ್ಪ ಕಾಲ ವಿಳಂಬ ಮಾಡಿದರು. ರಾಜ್ಯದಲ್ಲಿ ಸುಮಾರು 28 ತಾಲ್ಲೂಕುಗಳಲ್ಲಿ ಬ್ಯಾಂಕ್ ಗ್ಯಾರಂಟಿ ಕೊಡಲಿಲ್ಲ. ರೀ-ಆಕ್ಷನ್‌ಗೆ ಬಂತು. ಹೀಗಾಗಿ ಸರ್ಕಾರಕ್ಕೆ ಸ್ವಲ್ಪ ನಷ್ಟ ಕೂಡ ಬಂದಿತು. ಕೆಲವರು ಬ್ಯಾಂಕ್ ಗ್ಯಾರಂಟಿಯನ್ನು ಇವತ್ತು ಕೊಡುತ್ತೇವೆ, ನಾಳೆ ಕೊಡುತ್ತೇವೆ. ಬ್ಯಾಂಕಿನಲ್ಲಿ ವ್ಯವಹಾರ ನಡೆಯುತ್ತಿದೆ ಎಂದು ಹೇಳಿಕೊಂಡು ಬಂದರು. ಇವೆಲ್ಲಾ ಆದ್ದರಿಂದ 20.13 ಕೋಟಿ ರೂ.ಗಳ ಅರಿಯರ್ಸ್ ಉಳಿಯಿತು. ಕೆಲವು ಪ್ರಕರಣಗಳಲ್ಲಿ ಕರ್ನಾಟಕದ ರೆವಿನ್ಯೂ ಆಕ್ಟ್ ಪ್ರಕಾರ ರೆಕವರಿ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ಉಳಿದವನ್ನು ಅಬಕಾರಿ ಕಾಯಿದೆಯಡಿಯಲ್ಲಿ ವಸೂಲು ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ಇದನ್ನು ನಾವು ಯಾವುದೇ ಮುಲಾಜಿಲ್ಲದೇ ವಸೂಲು ಮಾಡುತ್ತೇವೆ. ರಾಜ್ಯದಲ್ಲಿ ಬರಗಾಲ ಬರದಿದ್ದರೆ ಮತ್ತು ನೀರಾ ಚಳುವಳಿ ಆಗದಿದ್ದರೆ, ಈ ಅರಿಯರ್ಸ್ ಕೂಡ ನಿಲ್ಲುವಂಥ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಈ ಎರಡು ಕಾರಣಗಳಿಗಾಗಿ ಸ್ವಲ್ಪ ಅರಿಯರ್ಸ್ ಬರಲು ಸಾಧ್ಯವಾಯಿತು.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ, ಬಾಕಿ ಎಷ್ಟಿದೆ ಎನ್ನುವುದನ್ನು ಹೇಳಿದರು. ಕರ ಸಮಾಧಾನ ಯೋಜನೆಯನ್ನು ಜಾರಿಗೆ ತಂದಿದ್ದರು. 164 ಕೋಟಿ ರೂಪಾಯಿಗಳ ಅಸಲನ್ನು ತುಂಬಿದರೆ 267 ಕೋಟಿ ರೂಪಾಯಿಗಳ ಬಡ್ಡಿಯನ್ನು ಮನ್ನಾ ಮಾಡುವಂಥ ಯೋಜನೆ ಅದಾಗಿತ್ತು. ತಾವು ಅದನ್ನು ಅನುಷ್ಠಾನ ಮಾಡಿದಿರೋ, ಹೇಗೆ? ಬಡ್ಡಿಯನ್ನು ವಸೂಲು ಮಾಡಲಾಯಿತೇ, ಅಸಲು ವಸೂಲಾಗಿದೆಯೇ? ಕರಸಮಾಧಾನ ಯೋಜನೆಯಿಂದ ಏನಾದರೂ ಪ್ರಯೋಜನವಾಗಿದೆಯೇ?

ಶ್ರೀ ಎಂ.ಎಂ. ನಾಣಯ್ಯ: ಕರ ಸಮಾಧಾನ ಯೋಜನೆಯು ದಿನಾಂಕ 1.10.02 ರಿಂದ 29.12.02 ರವರೆಗೆ ಜಾರಿಯಲ್ಲಿತ್ತು. ಸುಮಾರು 225 ಬಾಕಿದಾರರು ಇದರ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಅವರು ಸುಮಾರು 13 ಕೋಟಿ ರೂಪಾಯಿಗಳ ಅಸಲನ್ನು ಸಂದಾಯ

ಮಾಡಿದ್ದಾರೆ ಮತ್ತು ಸುಮಾರು 53 ಕೋಟಿ ರೂಪಾಯಿಗಳನ್ನು, ಬಡ್ಡಿ ರೂಪದಲ್ಲಿ ಇದ್ದಂಥಾದ್ದನ್ನು ಮನ್ನಾ ಮಾಡುವಂಥ ಅವಕಾಶವನ್ನೂ ಕೂಡ ಅವರು ತೆಗೆದುಕೊಂಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಬಾಕಿದಾರರು, ಬಡ್ಡಿ ಮನ್ನಾ ಮಾಡುವ ಈ ಯೋಜನೆಯ ಉಪಯೋಗ ಪಡೆದುಕೊಳ್ಳಲಿಲ್ಲ. ಈ ಪ್ರಯೋಜನವನ್ನು ಕೊಟ್ಟರೂ ಅವರು ಅಸಲನ್ನು ತುಂಬಲಿಲ್ಲ. ಅಂಥ ಬಾಕಿದಾರರಿಂದ ವಸೂಲು ಮಾಡಲು ಏನಾದರೂ ಕ್ರಮ ತೆಗೆದುಕೊಂಡಿರುವಿರಾ? ಕರ ಸಮಾಧಾನ ಯೋಜನೆ ಎನ್ನುವುದು ಸುಮ್ಮನೆ, ತೋರಿಕೆಗಾಗಿ ಮಾಡಿದಂಥ ಯೋಜನೆ ಎಂದು ನಾನು ಇವತ್ತೂ ಹೇಳುತ್ತೇನೆ. ಯಾರಿಗೋ ಒಂದಷ್ಟು ಲಾಭ ಮಾಡಲು ಅದನ್ನು ಮಾಡಿದ್ದು. ಈ ಯೋಜನೆಯನ್ನು ಮಾಡಿದ ಮೇಲೂ ಸರ್ಕಾರಕ್ಕೆ ಆದಾಯ ಬರಲಿಲ್ಲ. ಬಾಕಿ ಇದ್ದಂಥ 164 ಕೋಟಿ ರೂಪಾಯಿಗಳ ಅಸಲು ವಸೂಲಾಗಲಿಲ್ಲ. ಅಷ್ಟರಲ್ಲಿ ಆ ಯೋಜನೆಯ ಅವಧಿಯೇ ಮುಗಿದುಹೋಯಿತು. ಮುಂದೆ, ಅದನ್ನು ವಸೂಲು ಮಾಡಲು ಕಾನೂನು ಕ್ರಮವನ್ನೇನಾದರೂ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಎಂ.ಎಂ. ನಾಣಯ್ಯ: 152 ಪ್ರಕರಣಗಳಲ್ಲಿ ಕಂದಾಯ ಇಲಾಖೆಯ ಮೂಲಕ, ಕಂದಾಯ ರೂಪದಲ್ಲಿ ವಸೂಲಿ ಮಾಡಲು ಕ್ರಮ ಕೈಗೊಂಡಿದ್ದೇವೆ. ಉಳಿಕೆ 99 ಕೋಟಿ ರೂ.ಗಳನ್ನು ಅಬಕಾರಿ ಇಲಾಖೆಯಿಂದ ವಸೂಲು ಮಾಡಲು ಪ್ರಯತ್ನ ಪಟ್ಟಿದ್ದೇವೆ ಮತ್ತು ವಸೂಲು ಕೂಡ ಆಗಿದೆ. ಬಾಕಿದಾರರ ಚರಸ್ಥಿರ ಆಸ್ತಿಗಳು ಸರ್ಕಾರಕ್ಕೆ ಲೀನ್ ಆಗಿರುತ್ತದೆ. As per Section 60 of the Karnataka Excise Act, 1965, the defaulter's property will be leased to the Government. ಆದ್ದರಿಂದ ಬಾಕಿ ವಸೂಲಿ ಮಾಡುವುದರಲ್ಲಿ ಏನೂ ತೊಂದರೆಯಿಲ್ಲ. ಆದರೆ ಕೆಲವು ಬೇನಾಮಿ ಹೆಸರಿನಲ್ಲಿ ಇದ್ದ ಕಾರಣ ವಸೂಲಿ ಸರಿಯಾಗಿ ಆಗಲಿಲ್ಲ. We are trying to identify who is the real defaulter and in whose name the trade was conducted. The Deputy Commissioners (Excise) are investigating the matter as to who is the real defaulter and who conduct the business either under the power of attorney or otherwise.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಯಾರ ಹೆಸರಿನಲ್ಲಿ ಪ್ರಾಪರ್ಟೀಸ್ ಇದೆ ಅದನ್ನು ಬೇನಾಮಿ ಹೆಸರಿನಲ್ಲಿ ಅವರ ಪ್ರಾಪರ್ಟಿ ಇದೆಯೇ ಅಥವಾ ಬೇನಾಮಿ ಹೆಸರಿನಲ್ಲಿ ಆಕ್ಷನ್‌ಗೆ ನಿಂತಿದೆಯೇ ಅಟ್ಯಾಚ್ ಮಾಡಲು ಏಕೆ ಇದುವರೆಗೆ ಕ್ರಮ ತೆಗೆದುಕೊಳ್ಳಲಿಲ್ಲ, ಮಾಡಿದ್ದರೆ ಕಂದಾಯ ಕಾಯಿದೆ ಪ್ರಕಾರ ಅದನ್ನು ವಸೂಲು ಮಾಡಲು ಸಾಧ್ಯವಾಗುತ್ತಿತ್ತು. ಅನೇಕ ಎಕ್ಸೈಸ್ ಕಾಂಟ್ರಾಕ್ಟರುಗಳ ಬಳಿ ಆಸ್ತಿ ಇದೆ, ಅದು ಸರ್ಕಾರಕ್ಕೂ ಗೊತ್ತಿದೆ. ಅದನ್ನು ಅಟ್ಯಾಚ್ ಮಾಡಲು ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ?

ಶ್ರೀ ಎಂ.ಎಂ. ನಾಣಯ್ಯ: ಸರ್ಕಾರ ಇದರಲ್ಲಿ ಯಾವುದೇ ರೀತಿಯಲ್ಲಿ ಹಿಂದೇಟು ಹಾಕಿಲ್ಲ. ಯಾವಾಗಲೂ ಕ್ರಮಬದ್ಧವಾದಂಥ, ಶಿಸ್ತುಬದ್ಧವಾದಂಥ ಕ್ರಮ ತೆಗೆದುಕೊಳ್ಳುತ್ತೇವೆ. ಆಸ್ತಿಗೆ ಸಂಬಂಧಪಟ್ಟಂತೆ, ಅಬಕಾರಿ ಕಾಯಿದೆ ಪ್ರಕಾರ ಅವಕಾಶವಿಲ್ಲದಿದ್ದರೂ ಕೂಡ ಕೆಲವರು ಸಿವಿಲ್ ಕೋರ್ಟಿಗೆ ಹೋಗಿ ಸ್ಟೇ ಕೊಟ್ಟಿದ್ದರು. ಇದನ್ನು ಕೆಲವರು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದು, ಕೆಲವು ಪ್ರಕರಣಗಳಲ್ಲಿ ತಡೆಯಾಗಿದೆ. ಹೀಗಾಗಿ, ಕೆಲವು ಪ್ರಕರಣಗಳಲ್ಲಿ

ವಿಳಂಬವಾಗಿದೆ. ಈಗ ಬಾಕಿಯಿರುವ ಬೇನಾಮಿ ಎನ್ನುವುದು ಬಹಳ ಹಳೆಯದಾಗಿದೆ ಈಗ ಬ್ಯಾಂಕ್ ಗ್ಯಾರಂಟಿ ಇದೆ ಮತ್ತು ಒಂದೂವರೆ ತಿಂಗಳ ೇ ಎಂ ಡಿ ಯನ್ನು ಡೆಪಾಸಿಟ್ ಇಡುತ್ತಾರೆ. ಹಾಗಾಗಿ, ಈಗ ಅರಿಯರ್ಸ್ ನಿಲ್ಲುವಂಥ ಪ್ರಶ್ನೆ ಬರುವುದಿಲ್ಲ. ಬಾಕಿ ವಸೂಲಾತಿ ಮಾಡಲು ನಾವು ಖಂಡಿತವಾಗಿ ಸೂಕ್ತ ಕ್ರಮ ತೆಗೆದುಕೊಳ್ಳತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಸಿವಿಲ್ ಕೋರ್ಟಿನ ವ್ಯಾಪ್ತಿಗೆ ಬರದಿದ್ದರೂ ಸಹ, ಅಲ್ಲಿ ಸ್ಟೇ ಆಗಿತ್ತು ಎಂದರೆ, ನೀವು ಏಕೆ ಅದನ್ನು ಕಂಟೆಸ್ಟ್ ಮಾಡಲಿಲ್ಲ? ಇದು ಸಿವಿಲ್ ಕೋರ್ಟಿನ ವ್ಯಾಪ್ತಿಗೆ ಬರುವುದಿಲ್ಲ, ಹೈಕೋರ್ಟಿಗೆ ಹೋಗಬೇಕಾಗುತ್ತದೆ ಎನ್ನುವುದನ್ನು ಏಕೆ ಕೋರ್ಟಿನ ಗಮನಕ್ಕೆ ತರಲಿಲ್ಲ? ಈ ವಿಷಯದಲ್ಲಿ ಸುಮ್ಮನೆ ಕುಳಿತದ್ದು ಅಧಿಕಾರಿಗಳ ತಪ್ಪಲ್ಲವೇ? ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವಿರಾ?

Sri. M.M. Nanaiah:- We have brought this matter before the Hon'ble High Court also. We have drawn the attention of the Hon'ble High Court that all the Civil Courts have no jurisdiction to entertain the petition of the defaulters and stay the proceedings. Still the Hon'ble Civil Courts granted stay and stayed the proceedings. ಅದನ್ನು ಕೂಡ ನಮ್ಮ ಅಧಿಕಾರಿಗಳು ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಿದ್ದಾರೆ. ಆಮೇಲೆ ಅದು ಸೆಟ್ ಅಸೈಡ್ ಆಯಿತು. ಈಗ ಸಿವಿಲ್ ಕೋರ್ಟಿನಲ್ಲಿ ಯಾವ ಪ್ರೊಸೀಡಿಂಗ್ ಕೂಡ ಬಾಕಿ ಇಲ್ಲ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ): ರೈತರದೇನಾದರೂ ಬಾಕಿ ಇದ್ದರೆ ಅವರ ಮನೆಯ ಅಡಿಗೆಪಾತ್ರೆಗಳನ್ನು ಸಹ ಆಚೆ ಹಾಕುತ್ತಾರೆ. ಹೀಗಿರುವಾಗ ಅಬಕಾರಿ ಗುತ್ತಿಗೆದಾರರ ಬಾಕಿ ವಸೂಲಿಗೆ ಕ್ರಮ ತೆಗೆದುಕೊಂಡಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಇದು ಅಬಕಾರಿ ಗುತ್ತಿಗೆದಾರರಿಗೆ ಸಂಬಂಧಿಸಿದ್ದು. ಇದಕ್ಕೂ ರೈತರಿಗೂ ಸಂಬಂಧವಿಲ್ಲ. ಇದಕ್ಕೆ ನೀವು ಉತ್ತರಿಸಬೇಕಾಗಿಲ್ಲ. ಈಗ ಮುಂದಿನ ಪ್ರಶ್ನೆ ಮಾನ್ಯ ನಂಜುಂಡಸ್ವಾಮಿಯವರು, ಪ್ರಶ್ನೆ ಕೇಳಿ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ): ನೀವೇ ಇದಕ್ಕೆ ಉತ್ತರ ಕೊಡುವುದು ಬೇಡ ಎಂದು ಹೇಳಿದರೆ ಹೇಗೆ ಸ್ವಾಮಿ. ನೀವೂ ಸಹ ರೈತರು ಸ್ವಾಮಿ. ಅವರು ಉತ್ತರ ಕೊಡಲಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಅವರ ಬಾಕಿಯನ್ನು ಮನ್ನಾ ಮಾಡಿಬಿಡಿ. ಅವರನ್ನು ಕೇಳುವುದೇ ಬೇಡ.

ಅಧ್ಯಕ್ಷರು: ಅವರ ಪ್ರಶ್ನೆಗೆ ಉತ್ತರ ಕೊಡುವಿರಾ?

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ): ಮಾನ್ಯ ಅಧ್ಯಕ್ಷರೆ, 20 ಕೋಟಿ ರೂಪಾಯಿಗಳ ಬಾಕಿ ಹಣ ಏನಿದೆ ಇದನ್ನು ಯಾವಾಗ ವಸೂಲಿ ಮಾಡುತ್ತಾರೆ. ಅಥವಾ ಮನ್ನಾ ಮಾಡುತ್ತಾರೆಯೇ?

ಶ್ರೀ ಎಂ.ಎಂ. ನಾಣಯ್ಯ: ಮಾನ್ಯ ಅಧ್ಯಕ್ಷರೆ, ಪ್ರತಿ ದಿವಸ ನಮ್ಮ ಇಲಾಖೆಯಿಂದ ವಸೂಲಾತಿ ಕ್ರಮ ನಡೆಯುತ್ತದೆ. Every day there is proceedings. Every day

there is a step. ಆದರಲ್ಲಿ ನಿಧಾನ ಮಾಡುವಂಥದ್ದಾಗಲೀ ಅಥವಾ ಅದನ್ನು ಉದಾಸೀನ ಮಾಡುವುದಾಗಲೀ ಇಲ್ಲ.

ಯಲಹಂಕದ ಉಪನಗರದಲ್ಲಿ ವಿದ್ಯುತ್ ಬಿಲ್ ಪಾವತಿಗಾಗಿ ಸಂಚಾರಿ ಬಿಲ್ ಪಾವತಿ ಕೇಂದ್ರ ಪ್ರಾರಂಭಿಸುವುದು.

248(1560) ಶ್ರೀ ಪಾಟೀಲ್ ಜೆ.ಟಿ.(ಬೀಳಗಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಯಲಹಂಕ ಉಪನಗರ 4ನೇ ಹಂತದಲ್ಲಿ ಸುಮಾರು 5 ಸಾವಿರ ಮನೆಗಳಿದ್ದು, ವಿದ್ಯುತ್ ಬಿಲ್ ಪಾವತಿಸಲು ನಗದು ಕೇಂದ್ರ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಇಲ್ಲಿನ ನಿವಾಸಿಗಳಿಗೆ ವಿದ್ಯುತ್ ಬಿಲ್ ಪಾವತಿಸಲು ಅನುಕೂಲವಾಗುವಂತೆ ನಗದು ಕೇಂದ್ರವೊಂದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ. ಶಾಶ್ವತ ನಗದು ಕೇಂದ್ರ ಸ್ಥಾಪಿಸುವ ತನಕ ಸಂಚಾರಿ ಬಿಲ್ ಪಾವತಿ ಕೇಂದ್ರದ ವ್ಯವಸ್ಥೆಗಾಗಿ ತಕ್ಷಣ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. ಹೌದು.

ಆ. ಯಲಹಂಕ ಉಪನಗರದ 4ನೇ ಹಂತ ಯಲಹಂಕ ಉಪವಿಭಾಗಕ್ಕೆ ಸೇರಿದ್ದು, ಸದರಿ ಉಪ ವಿಭಾಗ ಕಛೇರಿಯಲ್ಲಿ ರಜಾದಿನ ಬಿಟ್ಟು ಉಳಿದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 3.30 ಗಂಟೆಯವರೆಗೆ ಎರಡು ನಗದು ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ರಜಾ ದಿನಗಳಲ್ಲಿ ಒಂದು ನಗದು ಕೇಂದ್ರ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 3.30 ಗಂಟೆಯವರೆಗೂ ಕಾರ್ಯನಿರ್ವಹಿಸುತ್ತಿದೆ. ಈ ಉಪ ವಿಭಾಗವು 4ನೇ ಹಂತದ ಉಪನಗರಕ್ಕೆ ಸಮೀಪವಿದ್ದು, ಅಲ್ಲಿಯ ಗ್ರಾಹಕರು ಉಪವಿಭಾಗದಲ್ಲಿ ವಿದ್ಯುತ್ ಬಿಲ್ ಪಾವತಿಸಬಹುದಾಗಿದೆ.

ಯಲಹಂಕ ಉಪನಗರದ 4ನೇ ಹಂತದಲ್ಲಿಯ ವಿದ್ಯುತ್ ಗ್ರಾಹಕರಿಗೆ ಅನುಕೂಲವಾಗುವಂತೆ ಹತ್ತಿರದ ನ್ಯೂಟೌನ್‌ನಲ್ಲಿ ವಿದ್ಯುತ್ ಬಿಲ್ಲು ಪಾವತಿ ಮಾಡಲು ಸೋಮವಾರ, ಮಂಗಳವಾರ ಮತ್ತು ಬುಧವಾರಗಳಂದು ಬೆಳಿಗ್ಗೆ 8.00 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ ನಗದು ಕೇಂದ್ರ ವ್ಯವಸ್ಥೆ ಮಾಡಲಾಗಿದೆ. ಈ ಸೌಲಭ್ಯದ ಜೊತೆಯಲ್ಲಿ ಯಲಹಂಕ 4ನೇ ಹಂತದ ನಿವಾಸಿಗಳು ಹಾಲಿ ಚಾಲ್ತಿಯಲ್ಲಿರುವ ಇ.ಸಿ.ಎಸ್. ಮತ್ತು ಬಿಲ್ ಜಂಕ್ಷನ್ ಯೋಜನೆಯ ಪ್ರಯೋಜನ ಪಡೆದು ಬಿಲ್ಲು ಪಾವತಿ ಮಾಡಬಹುದಾಗಿದೆ. ಮೇಲಿನ ಅನುಕೂಲತೆಗಳನ್ನು ಗಮನಿಸಿ ಅಲ್ಲಿಯ ನಿವಾಸಿಗಳಿಗೆ 4ನೇ ಹಂತದಲ್ಲಿ ನಗದು ಕೇಂದ್ರ ಸ್ಥಾಪಿಸುವ ವಿಚಾರ ಸದ್ಯಕ್ಕಿಲ್ಲ.

ಇ. ಮೇಲ್ಕಂಡ ಎಲ್ಲಾ ಸೌಲಭ್ಯ ಹಾಗೂ ಅನುಕೂಲ ಕಲ್ಪಿಸಿರುವುದರಿಂದ ಸಂಚಾರಿ ಬಿಲ್ಲು ಪಾವತಿ ಕೇಂದ್ರದ ವ್ಯವಸ್ಥೆಯನ್ನು ಸದ್ಯಕ್ಕೆ ಮಾಡುವ ಅವಶ್ಯಕತೆ ಕಂಡುಬಂದಿಲ್ಲ ಮುಂದೆ ಅವಶ್ಯಕತೆ ಬಂದರೆ ಅದನ್ನು ಮುಂದೆ ಪರಿಗಣಿಸಲಾಗುವುದು.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಯಲಹಂಕ ಉಪನಗರದ 4ನೇ ಹಂತದಲ್ಲಿ ಸುಮಾರು 5 ಸಾವಿರ ಮನೆಗಳಿದ್ದು ಅಲ್ಲಿಯ ನಿವಾಸಿಗಳು ವಿದ್ಯುತ್ ಬಿಲ್ ಪಾವತಿಸಲು